# ವಾರ್ಡ್ ನಂಬರ್ 11ರಲ್ಲಿ ರಾಘಣ್ಣ

ರಾಘವೇಂದ್ರ ರಾಜ್‌ಕುಮಾರ್ ಅವರ ನಟನಾಬದುಕಿನ ಸೆಕೆಂಡ್ ಇನಿಂಗ್ಸ್ ಜೋರಾಗಿಯೇ ಆರಂಭವಾಗಿದೆ. ಅಮ್ಮನ ಮನೆ, ತ್ರಯಂಬಕಂ, ಪೊಗರು, ಆಡಿಸಿದಾತ, ಹೀಗೆ ಹಲವು ಸಿನಿಮಾಗಳಲ್ಲಿ ನಟಿಸಿರುವ ಅವರು ಇದೀಗ ಹೊಸ ಚಿತ್ರವೊಂದಕ್ಕೆ ಸಹಿ ಹಾಕಿದ್ದಾರೆ. ಆ ಚಿತ್ರದ ಹೆಸರು 'ವಾರ್ಡ್ ನಂಬರ್ 11'.

ಗಣೇಶ ಚತುರ್ಥಿಯ ದಿನದಂದೇ ಈ ಚಿತ್ರದ ಟೈಟಲ್ ಲಾಂಚ್ ಮಾಡಲಾಗಿದೆ. ಶ್ರೀಕಾಂತ್ ಎಂಬ ಹೊಸ ಹುಡುಗ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಚಿತ್ರದಲ್ಲಿಯೂ ರಾಘಣ್ಣನ ಪಾತ್ರ ತುಂಬ ಭಿನ್ನವಾಗಿರುತ್ತದಂತೆ. ಗುರುರಾಜ್ ಎ. ಮತ್ತು ಸಂದೀಪ್ ಶಿವಮೊಗ್ಗ ಈ ಚಿತ್ರದ ನಿರ್ಮಾಣದ ಹೊಣೆಯನ್ನು ಹೊತ್ತಿದ್ದಾರೆ. ಸುರೇಂದ್ರನಾಥ್ ಅವರ ಸಂಗೀತ ಇರುವ ಚಿತ್ರಕ್ಕೆ ವಿ. ನಾಗೇಂದ್ರ ಪ್ರಸಾದ್, ಜಯಂತ ಕಾಯ್ಕಿಣಿ ಮತ್ತು ತಪಸ್ವಿ ಹಾಡುಗಳನ್ನು ಹೊಸೆದಿದ್ದಾರೆ.

ಹೊಸ ಹುಡುಗರ ಈ ಪ್ರಯತ್ನದಲ್ಲಿನ ತಾಜಾತನವೇ ರಾಘಣ್ಣನಿಗೆ ಈ ಸಿನಿಮಾ ಒಪ್ಪಿಕೊಳ್ಳುವಂತೆ ಮಾಡಿದೆಯಂತೆ. ಸಿನಿಮಾ ಚಿತ್ರಕಥೆ ಮತ್ತು ಪಾತ್ರ ಎರಡಕ್ಕೂ ಅವರು ಮೆಚ್ಚಿಕೊಂಡಿದ್ದಾರೆ. ಹಾಗೆಯೇ ಜನರಿಗೂ ಸಿನಿಮಾ ಇಷ್ಟವಾಗಿಯೇ ಆಗುತ್ತದೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದ್ದಾರೆ.





# ಪಾಸಾಗುವ ಹುಮ್ಮಸ್ಸಿನಲ್ಲಿ ಐಶಾನಿ

ಐಶಾನಿ ಶೆಟ್ಟಿ ಬಿಕಾಂ ಪಾಸ್ ಆಗಿದ್ದಾರೆ! ಅದು ಹೊಸ ವಿಷಯವೇ ಎಂದು ಮೂಗು ಮುರಿಯಬೇಡಿ. ಈ ಪರೀಕ್ಷೆ ನಡೆದಿದ್ದು ಕ್ಯಾಮೆರಾ ಎದುರು. ಅಂದರೆ ಐಶಾನಿ ಶೆಟ್ಟಿ ನಟಿಸಿರುವ 'ನಮ್ ಗಣಿ ಬಿಕಾಂ ಪಾಸ್' ಚಿತ್ರ ಚಿತ್ರೀಕರಣ ಮುಗಿದಿದೆ. ಗಣೇಶ ಹಬ್ಬದ ದಿನ ಆ ಚಿತ್ರದ ಪೋಸ್ಟರ್ ಅನ್ನೂ ತಂಡ ಬಿಡುಗಡೆ ಮಾಡಿದ್ದು, ಐಶಾನಿ ಸ್ಕೂಲ್ ಗರ್ಲ್ ಯೂನಿಫಾರ್ಮ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಹಾಗಾದ್ರೆ ಬಿಕಾಂ ಪಾಸ್ ಮಾಡಿದ ಗಣಿ ಸ್ಕೂಲ್ ಗರ್ಲ್ ಒಬ್ಬಳನ್ನು ಪ್ರೇಮಿಸುವ ಕಥೆಯೇ ಇದು? ಅಷ್ಟು ಸುಲಭಕ್ಕೆ ಚಿತ್ರತಂಡ ಕಥೆಯ ಜಾಡನ್ನು ಬಿಟ್ಟುಕೊಡುವುದಿಲ್ಲ. ತೆರೆಯ ಮೇಲೆಯೇ ನೋಡಿ ಆನಂದಿಸಿ ಎಂಬ ಸಿದ್ಧ ಉತ್ತರವನ್ನು ಮುಂದಿಟ್ಟು ಕುತೂಹಲದ ಒಗ್ಗರಣೆ ಹಾಕುತ್ತದೆ. ಅಭಿಷೇಕ್ ಶೆಟ್ಟಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಈ ಚಿತ್ರ ನಂತರ ಐಶಾನಿ ಮತ್ತು 'ಗುಲ್ಟು' ಸಿನಿಮಾದ ನಾಯಕನಟ ನವೀನ್ ಶಂಕರ್ ಜೊತೆಯಾಗಿ ನಟಿಸುತ್ತಿರುವ ಸಿನಿಮಾವೊಂದರ ಕೆಲಸದಲ್ಲಿ ಬ್ಯುಸಿಯಾಗಿದ್ದಾರೆ. ಇನ್ನಷ್ಟೇ ಈ ಚಿತ್ರದ ಟೈಟಲ್ ಲಾಂಚ್ ಆಗಲಿದೆ. ಒಟ್ಟಾರೆ ಚಿತ್ರರಂಗದಲ್ಲಿ ಹೊಸ ಬಗೆಯ ಚಿತ್ರಗಳ ಮೂಲಕ ಒಂದೊಂದೇ ಹೆಜ್ಜೆಗಳನ್ನು ಅಡಿಯಿಟ್ಟುಕೊಂಡು ಬರುತ್ತಿರುವ ಐಶಾನಿ, ಬೆಳ್ಳಿತೆರೆಯ ಎಕ್ಸಾಮ್‌ನಲ್ಲಿ ಪಾಸಾಗುವ ಹುಮ್ಮಸ್ಸಿನಲ್ಲಿದ್ದಾರೆ.

ಚಿತ್ರ: ರಾಘವ್